Received on 10/12/2020
WUP.

**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ:13: ಸುತ್ತೋಲೆ:2020-21/ವಿ.ವೇ

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿ:08-12-2020.

# ಸುತ್ತೋಲೆ

ವಿಷಯ: ರಾಜ್ಯದಲ್ಲಿ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳಲ್ಲಿ ರಕ್ತದಾನ ಹಾಗೂ ಹೆಚ್‌ಐವಿ ಸೋಕಿತ ಹಾಗೂ ಭಾಧಿತರಿಗೆ ಸಿಗುವ ಸೇವಾ ಸೌಲಭ್ಯದ ಬಗ್ಗೆ ಕಾಲೇಜು ಆವರಣದಲ್ಲಿ ಪ್ರದಶ೯ನದ ಫಲಕಗಳಲ್ಲಿ ಅಳವಡಿಸುವ ಬಗ್ಗೆ.

ಉಲ್ಲೇಖ: ಸಂಖ್ಯೆ: ಕೆ.ಎಸ್.ಎ.ಪಿ.ಎಸ್/ಐಐಸಿ/19/20-21. ದಿ:09.10.2020.

ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಕಾಲೇಜು ಆವರಣದಲ್ಲಿ ರಕ್ತದಾನ ಹಾಗೂ ಹೆಚ್‌ಐವಿ ಸೋಕಿತ ಹಾಗೂ ಭಾಧಿತರಿಗೆ ರಾಜ್ಯ ಸರ್ಕಾರದಿಂದ ಸಿಗುವ ಸೇವಾ ಸೌಲಭ್ಯದ ಬಗ್ಗೆ ಮುದ್ರಿಸಿರುವ ಸುಮಾರು (3 * 5) ಅಡಿ ಅಳತೆಯ ಮಾಹಿತಿಯ ಪಲಕವನ್ನು ಪ್ರದರ್ಶನದ ಫಲಕಗಳಲ್ಲಿ ಅಳವಡಿಸಲು ಉಲ್ಲೇಖಿತ ಪತ್ರದಲ್ಲಿ ಯೋಜನಾ ನಿರ್ದೇಶಕರು, ಕರ್ನಾಟಕ ರಾಜ್ಯ ಏಡ್ಸ್ ಪ್ರವೆನ್ ಷನ್ ಸೋಸೈಟಿ, ರವರು ಕೋರಿರುತ್ತಾರೆ.

ಸದರಿ ಕೋರಿಕೆಯನ್ನು ಪರಿಶೀಲಿಸಲಾಗಿದ್ದು ರಾಜ್ಯದಲ್ಲಿರುವ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳ ಕಾಲೇಜು ಆವರಣದಲ್ಲಿ ಪ್ರದರ್ಶನದ ಫಲಕಗಳಲ್ಲಿ ಅಳವಡಿಸಲು ಈ ಮೂಲಕ ಅನುಮತಿ ನೀಡಲಾಗಿದ್ದು, ಸದರಿ ಸಂಬಂದ ಕರ್ನಾಟಕ ರಾಜ್ಯ ಏಡ್ಸ್ ಪ್ರವೆನ್ ಷನ್ ಸೋಸೈಟಿ, ರವರಿಗೆ ಸ್ಥಳಾವಕಾಶ ನೀಡಿ ಸಹಕರಿಸಲು ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು ಸೂಕ್ತ ಕ್ರಮವಹಿಸಲು ಈ ಮೂಲಕ ಸೂಚಿಸಲಾಗಿದೆ.

9/12/2020

ಕಾಲೇಜು ಶಿಕ್ಷಣ ನಿರ್ದೇಶಕರು.

ಪ್ರತಿ:

1)ಪ್ರಾದೇಶಿಕ ಜಂಟಿ ನಿರ್ದೇಶಕರು,ಬೆಂಗಳೂರು,ಮೈಸೂರು,ಮಂಗಳೂರು,ಶಿವಮೊಗ್ಗ, ಧಾರವಾಡ,ಕಲಬುರಗಿ. (ಸೂಕ್ತ ಕ್ರಮವಹಿಸಲು).

2) ಪ್ರಾಂಶುಪಾಲರು ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪ್ರಥಮ ದರ್ಜೆ ಕಾಲೇಜುಗಳು.(ಅಗತ್ಯ ಕ್ರಮ ಕೈಗೊಳ್ಳಲು)

3) ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, (ವೆಬ್ ಸೈಟ್ ನಲ್ಲಿ ಪ್ರಕಟಿಸಲು)

4) ಕಛೇರಿ ಪ್ರತಿ